## ಕರ್ನಾಟಕ ಲೋಕಸೇವಾ ಆಯೋಗ

ಸಂಖ್ಯೆ:ಪಿಎಸ್ಸಿ 21 ಆರ್(3)/2023-24 ದಿನಾಂಕ: 05-08-2023.

### ಸೂಚನೆ

ಆಯೋಗದ ಅಧಿಸೂಚನೆ ಸಂಖ್ಯೆ ಆರ್(3)45/2016-17/ಪಿಎಸ್ಸಿ, ದಿನಾಂಕ:16-11-2016 ಹಾಗೂ ಸೇರ್ಪಡೆ ಅಧಿಸೂಚನೆಗಳು ದಿ:15-12-2016 ಮತ್ತು 13-01-2017ರಲ್ಲಿ ಅಧಿಸೂಚಿಸಿರುವ ಸರ್ಕಾರದ ವಿವಿಧ ಇಲಾಖೆಗಳಲ್ಲಿನ ಬೆರಳಚ್ಚುಗಾರರು ಹುದ್ದೆಗಳಿಗೆ ನಿಯಮಾನುಸಾರ ಶೇ.25ರಷ್ಟು ಹೆಚ್ಚುವರಿ ಪಟ್ಟಿಯನ್ನು ಈಗಾಗಲೇ ಪ್ರಕಟಿಸಲಾಗಿರುತ್ತದೆ. ಪ್ರಸ್ತುತ ಸರ್ಕಾರದ ವಿವಿಧ ಇಲಾಖೆಗಳು ಹೆಚ್ಚುವರಿ ಆಯ್ಕೆ ಪಟ್ಟಿಗಾಗಿ ಸಲ್ಲಿಸಿರುವ ಬೇಡಿಕೆಯ ಪ್ರಸ್ತಾವನೆಗಳಿಗನುಗುಣವಾಗಿ (ನಮೂನೆ-7) ಹೆಚ್ಚುವರಿ ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸಲು ಕ್ರಮ ವಹಿಸಲಾಗುತ್ತಿದೆ.

ಈ ಸಂಬಂಧ ಆಯೋಗವು ಈಗಾಗಲೇ ಪ್ರಕಟಿಸಲಾದ ಬೆರಚ್ಚುಗಾರರ ಹೆಚ್ಚುವರಿ ಪಟ್ಟಿಯ ಆರ್.ಪಿ.ಸಿ.(137) ಹಾಗೂ ಹೈ.ಕ.(63) ಹುದ್ದೆಗಳ **ಹೆಚ್ಚುವರಿ ಆಯ್ಕೆ ಪಟ್ಟಿಗೆ ಆಯ್ಕೆಯಾಗಲು ಇಚ್ಛಿಸದಿದ್ದಲ್ಲಿ,** ಈ ಬಗ್ಗೆ ದಿನಾಂಕ-11-08-2023ರೊಳಗಾಗಿ ಯಾವುದಾದರೊಂದು ಮೂಲ ಗುರುತಿನ ಚೀಟಿಯೊಂದಿಗೆ **"ಕಾರ್ಯದರ್ಶಿ. ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು-560001"**, ಇವರ ಸಮ್ಮುಖದಲ್ಲಿ ಖುದ್ದು ಹಾಜರಾಗಿ ಲಿಖಿತವಾಗಿ ಸ್ವ-ಇಚ್ಛಾ ಹೇಳಿಕೆಯನ್ನು (willingness) ಸಲ್ಲಿಸುವಂತೆ ಸೂಚಿಸಿದೆ.

(ಸುರಳ್ಕರ್ ವಿಕಾಸ್ ಕಿಶೋರ್)
ಕಾರ್ಯದರ್ಶಿ,
ಕರ್ನಾಟಕ ಲೋಕಸೇವಾ ಆಯೋಗ.